# ಘನತೆಯ ಪಾತ್ರವನ್ನೇ ಬಯಸುವೆ

## ಮಾನಸ ಮನೋಹರ್
ಉದಯದ 'ಶಾಂಭವಿ'ಯ ಶಿವಗಾಮಿ



◆ **ನಿಮ್ಮ ಪರಿಚಯ ಹೇಳಿ?**

ಹುಟ್ಟಿ ಬೆಳೆದಿದ್ದು ಬೆಂಗಳೂರು, ಎಂಬಿಎ ಮಾಡಿದ್ದೇನೆ. ಸುಮಾರು ಹನ್ನೆರಡು ವರ್ಷಗಳಿಂದ ಬಣ್ಣದ ಲೋಕದಲ್ಲಿ ಇದ್ದೇನೆ. ಆರಂಭದಲ್ಲಿ ಖಾಸಗಿ ಟೀವಿಯಲ್ಲಿ ವಿಡಿಯೊ ಜಾಕಿಯಾಗಿ ನನ್ನ ವೃತ್ತಿ ಜೀವನ ಆರಂಭವಾಯಿತು. ಆ ವರ್ಷದ 'ಮಿಸ್ ಕರ್ನಾಟಕ' ಸ್ಪರ್ಧೆಯಲ್ಲಿ ಗೆಲುವು ನನ್ನ ಪಾಲಿಗೆ ಬಂತು. ಅಷ್ಟರಲ್ಲಿ ಸಿನಿಮಾ, ಕಿರುತೆರೆಗೆ ಅವಕಾಶಗಳು ಬರಲು ಆರಂಭಿಸಿದವು. ಚಿಕ್ಕವಯಸ್ಸಿನಿಂದ ನಟನೆಯ ಬಗ್ಗೆ ಆಸೆ ಇತ್ತು ಪ್ರಯತ್ನ ಮಾಡಿರಲಿಲ್ಲ. ಆಕಸ್ಮಿಕವಾಗಿ ಅಂತಹ ಅವಕಾಶ ಸಿಕ್ಕಿತು. ಇಂಟರ್ನ್‌ಶಿಪ್ ಮಾಡುವ ಸಂಬಂಧ ವಾಹಿನಿಗೆ ಹೋಗಿದ್ದೆ. ಅಲ್ಲಿ ಆಡಿಷನ್ ನಡೀತಾ ಇತ್ತು. ನನಗೂ ಕೊಡಲು ತಿಳಿಸಿದರು. ನನಗೆ ಇಂಟರ್ನಿಯಾಗಿ ತರಬೇತಿ ಪಡೆಯುತ್ತಲೇ ಕೆಲಸ ಮಾಡುವ ಅವಕಾಶ ಅಲ್ಲಿ ಲಭಿಸಿತು. ಲೈವ್ ಕಾರ್ಯಕ್ರಮ ನೀಡುವ ಜೊತೆಗೆ ಅದರ ತಾಂತ್ರಿಕ ಕೆಲಸವನ್ನೂ ಮಾಡುತ್ತಿದ್ದೆ.

◆ **ನೀವು ನಟನೆಯತ್ತ ವಾಲಿದ ಸಂದರ್ಭ ಹೇಗಿತ್ತು?**

ನಮ್ಮ ಕಾರ್ಯಕ್ರಮವನ್ನು ನಿರ್ದೇಶಕ ಆರೂರು ಜಗದೀಶ್ ವೀಕ್ಷಿಸಿ ಕರೆ ಮಾಡಿದ್ದರು. ಅವರ 'ಅಶ್ವಿನಿ ನಕ್ಷತ್ರ'ಕ್ಕೆ ಅವಕಾಶ ಕೊಡುವುದಾಗಿ ಆಹ್ವಾನಿಸಿದರು. ಆಗ ಕಾಲೇಜು ಮತ್ತು ಕೆಲಸ ಇದ್ದಿದ್ದರಿಂದ ಮಾಡಲು ಆಗುವುದಿಲ್ಲ ಎಂದು ಹೇಳಿದೆ. ಮತ್ತೊಮ್ಮೆ ಪಾತ್ರದ ರಿಪ್ಲೇಸ್‌ಗೆ ಕರೆದರೂ ಅದಕ್ಕೂ ಸಾಧ್ಯವಾಗುವ ಸ್ಥಿತಿ ಇರಲಿಲ್ಲ. ಪುಟ್ಟ ಪಾತ್ರವನ್ನು ಅವರ ತಂಡದಲ್ಲಿ ನಿರ್ವಹಿಸಿದೆ. ಗೌರೀಶ್ ಅಕ್ಕಿ ಅವರ 'ಸಿನಿಮಾ ಮೈ ಡಾರ್ಲಿಂಗ್' ಮೊದಲ ಸಿನಿಮಾ ಮಾಡಿದೆ. ಅದು ಚೆನ್ನಾಗಿತ್ತು. '2015 ಲವ್ ಸ್ಟೋರೀಸ್' ಎಂಬ ಬಹುಭಾಷಾ ಸಿನಿಮಾವನ್ನು ಮಾಡಿದೆ.

◆ **ರಿಯಾಲಿಟಿ ಶೋಗೆ ಅವಕಾಶ ಬಂದರೆ ಏನು ಹೇಳ್ತೀರಿ?**

ಖಂಡಿತ ಮಾಡುವೆ. ಈ ಹಿಂದೆ ನಾನು ಕಲರ್ಸ್ ಕನ್ನಡದಲ್ಲಿ 'ತಕಧಿಮಿತ' ಶೋನಲ್ಲಿ ಸ್ಪರ್ಧಿಸಿದ್ದೆ. ಸಿನಿಮಾ, ಧಾರಾವಾಹಿ, ಮಾಡೆಲಿಂಗ್, ಆ್ಯಡ್ ಚಿತ್ರೀಕರಣ ಎಲ್ಲ ಬೇರೆ ಬೇರೆ. ರಿಯಾಲಿಟಿ ಶೋ ಬೇರೆಯದೇ ಅನುಭವ ನೀಡುತ್ತದೆ. ಕಲಾವಿದರಿಗೆ ಎಲ್ಲ ರೀತಿಯ ಅನುಭವ ಇರಬೇಕು. ರಿಯಾಲಿಟಿ ಶೋ ಸ್ವರೂಪ, ಅದು ಏನು ಹೇಳುತ್ತದೆ ಎನ್ನುವುದು ಮುಖ್ಯ. ಅದು ನನಗೆ ಸೂಕ್ತ ಆಗುತ್ತದೆ ಎಂದೆನಿಸಿದರೆ ಮಾಡುತ್ತೇನೆ.

◆ **ಪಾತ್ರಗಳ ಆಯ್ಕೆಗೆ ನಿಮ್ಮ ಮಾನದಂಡ ಏನು?**

ಆ ಪಾತ್ರದ ಘನತೆ ಮುಖ್ಯ ಆಗುತ್ತದೆ. ಅದು ಪುಟ್ಟ ಪಾತ್ರವೇ ಆಗಿರಬಹುದು. ಲೀಡ್ ಅಥವಾ ನೆಗೆಟಿವ್ ಪಾತ್ರ ಕೂಡ ಆಗಿರಬಹುದು. ಯಾವುದೇ ಆಗಿದ್ದರೂ ಅದಕ್ಕೆ ಮಹತ್ವ ಇರಬೇಕು. ನಾನು ನಟಿಸುವ ಯಾವುದೇ ಪಾತ್ರದಲ್ಲಿ ಅದನ್ನು ನಾನು ನಿರೀಕ್ಷೆ ಮಾಡುತ್ತೇನೆ. ಪಾತ್ರಕ್ಕೆ ತಕ್ಕಂತೆ ತೆರೆಯಲ್ಲಿ ಅವಕಾಶ ಇರಬೇಕು. ಆ ಪಾತ್ರದಿಂದ ಕಥೆಗೂ ಸ್ಕೋಪ್ ಇರಬೇಕು. ನನಗೆ ನಟನೆ ಎನ್ನುವುದು ಪ್ಯಾಶನ್. ಎಲ್ಲ ರೀತಿಯ ಪಾತ್ರಗಳನ್ನೂ ನಿರ್ವಹಿಸಬೇಕು ಎನ್ನುವ ಸಂಕಲ್ಪ ಮಾಡಿಕೊಂಡಿದ್ದೇನೆ. ನಾನು ಆಯ್ಕೆ ಮಾಡಿಕೊಳ್ಳುವ ಪಾತ್ರ ಕಥೆಗೆ ಎಷ್ಟು ಮುಖ್ಯ ಆಗುತ್ತದೆ ಎನ್ನುವುದರ ಆಧಾರದ ಮೇಲೆ ಪಾತ್ರವನ್ನು ನೋಡುತ್ತೇನೆ. ತೆರೆಯ ಮೇಲೆ ಕಡಿಮೆ ಕಾಲಾವಕಾಶ ಇದ್ದರೂ ಆ ಪಾತ್ರದ ಪ್ರಭಾವ ಹೆಚ್ಚು ಮುಖ್ಯ.

◆ **ಶಿವಗಾಮಿ ಪಾತ್ರ ಹೇಗಿದೆ?**

'ಶಾಂಭವಿ'ಯಲ್ಲಿ ಪ್ರಧಾನ ಪಾತ್ರ ನನ್ನ ಪಾಲಿಗೆ ಬಂದಿದೆ. ಇದರಲ್ಲಿ ದ್ವಿಪಾತ್ರ ಮಾಡುತ್ತಿದ್ದೇನೆ. ಶಿವಗಾಮಿ ಪಾತ್ರವೇ ಭಿನ್ನವಾಗಿದೆ. ಸಾಮಾನ್ಯವಾಗಿ ಸೀರಿಯಲ್‌ಗಳಲ್ಲಿ ಪಾತ್ರಕ್ಕೆ ಒಂದು ನಿರ್ದಿಷ್ಟ ಸ್ವರೂಪದಲ್ಲಿ ವಿನ್ಯಾಸ ಮಾಡಿರುತ್ತಾರೆ. ಅದು ಸುರಕ್ಷಿತ ವಲಯವನ್ನು ದಾಟುವ ಪ್ರಯತ್ನ ಹೆಚ್ಚಿನ ಸಂದರ್ಭದಲ್ಲಿ ಮಾಡುವುದಿಲ್ಲ. ಇಲ್ಲಿ ಡೀಗ್ಲಾಮರ್ ಆಗಿ ಹೆಣ್ಣು ಅಬಲೆ ಅಲ್ಲ ಎನ್ನುವುದನ್ನು ತೋರಿಸುತ್ತಾರೆ. ಹೆಣ್ಣು ಮಕ್ಕಳು ಸ್ಟ್ರಾಂಗ್ ಎನ್ನುವುದು ನಿರೂಪಿಸುವುದು ಅದ್ಭುತವಾಗಿದೆ. ಪಾತ್ರವನ್ನು ಹೆಣೆದಿರುವ ರೀತಿ ಹಾಗೂ ಅದಕ್ಕೆ ಕೊಟ್ಟಿರುವ ಆದ್ಯತೆ ತುಂಬ ಚೆನ್ನಾಗಿದೆ. ವೈಯಕ್ತಿಕವಾಗಿ ನಾನೂ ಸ್ಟ್ರಾಂಗ್ ಇದ್ದೇನೆ. ಜೀವನದಲ್ಲಿ ಅನೇಕ ಹಂತಗಳನ್ನು ದಾಟಿ ಬಂದಿದ್ದೇನೆ. ನಾನೂ ಮಹಿಳೆ ಅಬಲೆ ಅಲ್ಲ ಎಂದುಕೊಂಡಿದ್ದೇನೆ. ಚಿಕ್ಕಂದಿನಿಂದ ಅಪ್ಪ ಅಮ್ಮ ಅದನ್ನೇ ಕಲಿಸಿ ಬೆಳೆಸಿದ್ದಾರೆ. ನಾನೂ ಹಾಗೆಯೇ ನಂಬಿದ್ದೇನೆ. ನನ್ನ ಭಾವನೆಗಳಿಗೆ ಸ್ಪಂದಿಸುವ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ, ಅದೇ ಸಂತೋಷ.

ಮೊದಲು 'ಜೊತೆ ಜೊತೆಯಲಿ' ಮೀರಾ ಹೆಗಡೆ ಪಾತ್ರವನ್ನು ಮಾಡುತ್ತಿದ್ದೆ. ಅದು ಕೂಡ ತುಂಬ ಸಮರ್ಥ ಪಾತ್ರ. ಯಾವುದೇ ರೀತಿಯಲ್ಲೂ ಮಹಿಳೆ ಕಡಿಮೆ ಅಲ್ಲ ಎನ್ನುವುದನ್ನು ಅದು ಸಾಬೀತು ಮಾಡಿತ್ತು. ಮಹಿಳೆ ಸ್ವತಂತ್ರವಾಗಿ ಒಂದು ಕಂಪನಿ ನಡೆಸಬಲ್ಲಳು, ಎಂತಹ ಉದ್ಯಮವನ್ನು ಒಬ್ಬಳೇ ಮಾಡಬಲ್ಲಳು ಎನ್ನುವುದನ್ನು ಅದು ಹೇಳುತ್ತಿತ್ತು. ಅಂತಹ ಪಾತ್ರಗಳನ್ನೇ ನಾನೂ ಮಾಡಿರುವುದು. ಅಳುಮುಂಜಿ, ಶೋಷಣೆಯನ್ನು ಸಹಿಸಿಕೊಂಡು ತಾಳ್ಮೆಯೇ ಮುಖ್ಯ ಎನ್ನುವ ಪಾತ್ರಗಳು ನನಗೂ ಅಷ್ಟು ಇಷ್ಟವಾಗುವುದಿಲ್ಲ. ಆ ರೀತಿ ವೈಯಕ್ತಿಕವಾಗಿ ಇರಲೂ ಬಯಸುವುದಿಲ್ಲ. ಪ್ರಜೆ ಎಂದರೆ ವ್ಯಕ್ತಿ. ಇಲ್ಲಿ ಹೆಣ್ಣು–ಗಂಡು ಇತರರು ಎಂದು ಪರಿಗಣಿಸುವುದಿಲ್ಲ. ವ್ಯಕ್ತಿಯಾಗಿ ಒಳ್ಳೆಯ ರೀತಿ ಇರಬೇಕು. ಸಾಧ್ಯ ಆದರೆ ನಮ್ಮ ಸುತ್ತಲಿನವರಿಗೂ ಒಳ್ಳೆಯದು ಮಾಡಬೇಕು ಎನ್ನುವುದು ನನ್ನ ಪರಿಕಲ್ಪನೆ.

■ **ರಾಘವೇಂದ್ರ ಕೆ.**